# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ
ಶೆಟ್ಟಿಹಳ್ಳಿ ಉಪ ವಿಭಾಗ, ದಾಸರಹಳ್ಳಿ ವಲಯ

ಸಂಖ್ಯೆ:ಬೃ.ಬೆಂ.ಮ!ಪಾ/ದಾ.ವ/ಸ.ಅ/ವಾ.13/ಪಿಆರ್:09 :2021–22

ದಿನಾಂಕ: 21.09.2021

## ಮಲ್ಲಸಂದ್ರ ವಾರ್ಡ್–13 ರ ವಾರ್ಡ್ ಸಭೆಯ (Ward Decentralized Traige and Emergency Response (DETER) Committee for COVID-19) ನಡವಳಿ

ದಿನಾಂಕ:21.09.2021 ರಂದು ಬೆಳಗ್ಗೆ 11.30 ಗಂಟೆಗೆ ಶ್ರೀ.ಎಸ್.ಎಲ್. ವಿಶ್ವನಾಥ್, ವಾರ್ಡ್ ಕಮಿಟಿ ನೋಡೆಲ್ ಆಫೀಸರ್ ರವರ ಅಧ್ಯಕ್ಷತೆಯಲ್ಲಿ ಮಲ್ಲಸಂದ್ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

**ಹಾಜರಿದ್ದವರು:**

1. ಶ್ರೀ. ರುದ್ರಮುನಿ ಆರ್.ಟಿ., ಸಹಾಯಕ ಅಭಿಯಂತರರು, ವಾರ್ಡ್ ನಂ.13 ಮಲ್ಲಸಂದ್ರ.
2. ಶ್ರೀ. ಮಂಜುಗಗನ್, ಕಿರಿಯ ಆರೋಗ್ಯ ಪರಿವೀಕ್ಷಕರು, ಮಲ್ಲಸಂದ್ರ
3. ಶ್ರೀ ಲೋಕರಾಜ್, ವಾಟರ್ ಇನ್ಸ್ಪೆಕ್ಟರ್, ಬಿ.ಡಬ್ಲ್ಯೂ.ಎಸ್.ಎಸ್.ಬಿ.
4. ಶ್ರೀ ರಾಜ್‌ಕುಮಾರ್, ಕಂದಾಯ ಪರಿವೀಕ್ಷಕರು
5. ಶ್ರೀ ಉಮೇಶ್, ಬೋರ್‌ವೆಲ್ ವಿಭಾಗ.
6. ಶ್ರೀ. ಗೋಪಾಲ್ ರವರು ವಾರ್ಡ್ ಸಮಿತಿ ಸದಸ್ಯರು.
7. ಶ್ರೀ ಬೈಲಪ್ಪ ರವರು ವಾರ್ಡ್ ಸಮಿತಿ ಸದಸ್ಯರು.
8. ಶ್ರೀ ಅಶೋಕ್, ರವರು ವಾರ್ಡ್ ಸಮಿತಿ ಸದಸ್ಯರು
9. ಶ್ರೀ ಮಹಾದೇವ್ ಎಂ. ಮಾರ್ಷಲ್, ಮಲ್ಲಸಂದ್ರ.
10. ಶ್ರೀ ಬಾಲಾಜಿ ಎಂ, ಸೂಪರ್ ವೈಸರ್.
11. ಶ್ರೀ ಅಂಬರೀಶ್ ಡಿ.ಎಲ್. ವಾರ್ಡ್ ಸಮಿತಿ ಸದಸ್ಯರು

ಶ್ರೀ. ರುದ್ರಮುನಿ ಆರ್.ಟಿ. ರವರು ಕಾರ್ಯದರ್ಶಿರವರು ವಾರ್ಡ್ ಸಭೆಯಲ್ಲಿ ಹಾಜರಿದ್ದ ನೋಡೆಲ್ ಅಧಿಕಾರಿಯಾದ ವಿಶ್ವನಾಥ್ ರವರಿಗೆ ಹಾಗೂ ಸಭೆಯಲ್ಲಿ ಹಾಜರಿದ್ದ ವಾರ್ಡ್ ಸದಸ್ಯರುಗಳಿಗೆ ಮತ್ತು ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

**1. ಕಸ ವಿಲೇವಾರಿ ಬಗ್ಗೆ.**

ವಾರ್ಡ್ ವ್ಯಾಪ್ತಿಯ ಕೆಲವು ಬಡಾವಣೆಗಳಾದ ರವೀಂದ್ರನಗರ 3ನೇ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳಲ್ಲಿ ಮುನೇಶ್ವರನಗರ ಕಸ ವಿಲೇವಾರಿ ಆಗದ ಬಗ್ಗೆ ಶ್ರೀ ಶಿವಣ್ಣ ಮತ್ತು ಗಂಗಣ್ಣ ರವರು ವಾರ್ಡ್ ಸಭೆಯಲ್ಲಿ ಅಸಮಾಧಾನವನ್ನು ವ್ಯಕ್ತಪಡಿಸಿ ಸಭೆಯ ಗಮನಕ್ಕೆ ತಂದರು. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಸೂಕ್ತ ಕ್ರಮವಹಿಸಿ ವಾರ್ಡ್ ವ್ಯಾಪ್ತಿಯಲ್ಲಿ ಕಸ ವಿಲೇವಾರಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವಂತೆ ವಾರ್ಡ್ ಅಧ್ಯಕ್ಷರು ಸೂಚಿಸಿದರು.

**2. ನೀರು ಪೂರೈಕೆ ಮತ್ತು ಒಳಚರಂಡಿ ವ್ಯವಸ್ಥೆ**

ಶ್ರೀ ರೇಣುಕೇಶ್ವರರವರು ಪ್ರಶಾಂತನಗರ ರಾಜಣ್ಣ ಮನೆ ಹತ್ತಿರ, ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಪೂರೈಸುವ ನೀರು ಕಲುಷಿತವಾಗಿದ್ದು ಶೀಘ್ರ ಪರಿಹರಿಸುವಂತೆ ಕೋರಿದರು. ಸಭೆಯ ಅಧ್ಯಕ್ಷರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳಿಗೆ ಶೀಘ್ರವೇ ಪರಿಹರಿಸುವಂತೆ ಸೂಚಿಸಿದರು.



Scanned by CamScanner

3. **ಕೋವಿಡ್ 17 ನೇ ಲಸಿಕೆ ಮೇಳದ ಬಗ್ಗೆ.**

ವಾರ್ಡ್ ನೋಡೆಲ್ ಅಧಿಕಾರಿಗಳು ಆರೋಗ್ಯ ವಿಭಾಗದ ಸಿಬ್ಬಂದಿಗೆ 17 ನೇ ಲಸಿಕೆ ಮೇಳದ ಬಗ್ಗೆ ವಿಸ್ತರಿಸುವಂತೆ ಸೂಚಿಸಿದರು. ಆರೋಗ್ಯ ಸಿಬ್ಬಂದಿಯವರು ಮಾತನಾಡುತ್ತಾ ಲಸಿಕೆ 17ನೇ ಮೇಳದಲ್ಲಿ 3000 ಫಲಾನುಭವಿಗಳಿಗೆ ಲಸಿಕೆಯನ್ನು ನೀಡಿದ್ದು ಹಾಗೂ ದಿನಪ್ರತಿ ಸರಾಸರಿ 200 ಫಲಾನುಭವಿಗಳಿಗೆ ಲಸಿಕೆ ನೀಡಲಾಗುತ್ತಿದ್ದು, ವಾಸ್ತುಸ್ಥಿತಿಯಲ್ಲಿ ಈಗ 4 ಕೋವಿಡ್ ಪ್ರಕರಣಗಳು ವಾರ್ಡ್‌ನಲ್ಲಿ ವರದಿಯಾಗಿದ್ದು, 3 ಸೋಂಕಿತ ರೋಗಿಗಳು ಮನೆ ಆರೈಕೆಯಲ್ಲಿದ್ದು, ಒಬ್ಬ ಕೋವಿಡ್ ಸೋಂಕಿತ ಆಸ್ಪತ್ರೆಯಲ್ಲಿರುವವರೆಂದು ವಿಸ್ತಾರವಾಗಿ ವಿವರಿಸಿದರು.

4. **ರಸ್ತೆ ಗುಂಡಿಗಳ ಬಗ್ಗೆ**

ಶ್ರೀಮತಿ ಸುಶೀಲಮ್ಮ ರವರು ಮಾತನಾಡಿ ರವೀಂದ್ರನಗರ 1ನೇ ಮುಖ್ಯರಸ್ತೆಯ ಚರಂಡಿಯಲ್ಲಿ ನೀರು ಸರಾಗವಾಗಿ ಹರಿಯದೇ ರಸ್ತೆ ಗುಂಡಿಗಳಾಗಿದ್ದು ಮತ್ತು ಔಷಧ ಸಿಂಪಡಣೆ ಸಮರ್ಪಕವಾಗಿ ನಿರ್ವಹಿಸುತ್ತಿಲ್ಲವೆಂದು ವಿವರಿಸಿದರು. ಸಭೆಯಲ್ಲಿ ಹಾಜರಿದ್ದ ವಾರ್ಡ್ ಸದಸ್ಯ ಕಾರ್ಯದರ್ಶಿರವರು ಮಾತನಾಡಿ ಶೀಘ್ರವೇ ಪರಿಹರಿಸಲಾಗುವುದೆಂದು ವಿವರಿಸಿದರು.

5. **ಕಲ್ಯಾಣ ಇಲಾಖೆಯ ಅನುದಾನ ಮಹಾದೇವಪುರ ವಲಯಕ್ಕೆ ವರ್ಗಾವಣೆ ಆಗಿರುವ ಬಗ್ಗೆ.**

ಸಭೆಯಲ್ಲಿ ಹಾಜರಿದ್ದ ವಾರ್ಡ್ ಕಮಿಟಿ ಸದಸ್ಯರು ಮಾತನಾಡುತ್ತಾ 2020–21 ನೇ ಸಾಲಿನಲ್ಲಿ ಕಲ್ಯಾಣ ಇಲಾಖೆಯಲ್ಲಿ ದಾಸರಹಳ್ಳಿ ವಲಯಕ್ಕೆ ಮೀಸಲಿಟ್ಟಿದ್ದ ಅನುದಾನವನ್ನು ಮಹಾದೇವಪುರ ವಲಯಕ್ಕೆ ವರ್ಗಾವಣೆಯಾಗಿರುವ ಹಿನ್ನೆಲೆಯಲ್ಲಿ ಸದರಿ ಅನುದಾನವನ್ನು ಹಿಂಪಡೆಯುವ ಬಗ್ಗೆ ಕೋರಿದರು. ವಾರ್ಡ್ ಅಧ್ಯಕ್ಷರು ಕಲ್ಯಾಣ ಅಧಿಕಾರಿಗಳಿಗೆ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಿದರು.

6. **2021–22 ನೇ ಸಾಲಿನ ಅನುದಾನದ ಕ್ರಿಯಾ ಯೋಜನೆ ಪ್ರಸ್ತಾವನೆಯ ಬಗ್ಗೆ.**

2021–22 ನೇ ಸಾಲಿನಲ್ಲಿ ಬೋರ್‌ವೆಲ್ ದುರಸ್ಥಿಗೆ ರೂ.20.00 ಲಕ್ಷಗಳು, ಪಾದಚಾರಿ ಮಾರ್ಗ ಅಭಿವೃದ್ಧಿಗೆ ರೂ.20.00 ಲಕ್ಷಗಳು, ರಸ್ತೆ ಗುಂಡಿ ದುರಸ್ಥಿಪಡಿಸಲು ರೂ.20.00 ಲಕ್ಷಗಳು ಮತ್ತು ಚರಂಡಿ ಮತ್ತು ರಸ್ತೆಗಳನ್ನು ದುರಸ್ಥಿಪಡಿಸಲು ರೂ.35.25 ಲಕ್ಷಗಳಿಗೆ 2021–22 ನೇ ಸಾಲಿನ ಅನುದಾನದ ಕ್ರಿಯಾ ಯೋಜನೆ ಪ್ರಸ್ತಾವನೆಗೆ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದಿಸಲಾಯಿತು.

**ಸದಸ್ಯ ಕಾರ್ಯದರ್ಶಿ**
**ಹಾಗೂ ಸಹಾಯಕ ಅಭಿಯಂತರರು**
**ವಾರ್ಡ್ ನಂ. 13, ಮಲ್ಲಸಂದ್ರ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

21/9/2021
**ನೋಡಲ್ ಅಧಿಕಾರಿ ಹಾಗೂ**
**ವಾರ್ಡ್ ಸಮಿತಿ ಅಧ್ಯಕ್ಷರು, ವಾ.ನಂ.13, ಮಲ್ಲಸಂದ್ರ**
**ಮತ್ತು ತಹಶೀಲ್ದಾರ್, ಉಪ ಆಯುಕ್ತರು(ಭೂಸ್ವಾಧೀನ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

<u>ಅಧಿಕಾರಿಗಳ ಮಾಹಿತಿಗಾಗಿ:–</u>

1) ಮಾನ್ಯ ವಲಯ ಆಯುಕ್ತರು, ದಾಸರಹಳ್ಳಿ ವಲಯ, ಬಿ.ಬಿ.ಎಂ.ಪಿ, ಬೆಂಗಳೂರು ರವರ ಅವಗಾಹನೆಗಾಗಿ ಮಂಡಿಸಿದೆ.
2) ಮಾನ್ಯ ಜಂಟಿ ಆಯುಕ್ತರು (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
3) ಮುಖ್ಯ ಅಭಿಯಂತರರು, (ದಾಸರಹಳ್ಳಿ) ವಲಯರವರ ಅವಗಾಹನೆಗಾಗಿ ಮಂಡಿಸಿದೆ.
4) ಆರೋಗ್ಯ ವೈಧ್ಯಾಧಿಕಾರಿಗಳು (ದಾಸರಹಳ್ಳಿ) ವಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
5) ವಲಯ ಅರಣ್ಯಾಧಿಕಾರಿಗಳು, ದಾಸರಹಳ್ಳಿ ವಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6) ಕಾರ್ಯಪಾಲಕ ಅಭಿಯಂತರರು, ದಾ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
7) ಸಹಾಯಕ ಕಾರ್ಯಪಾಲಕ ಅಭಿಯಂತರರು (ಶೆ.ಉ.ವಿ) ರವರ ಮಾಹಿತಿಗಾಗಿ ಕಳುಹಿಸಿದೆ
8) ಸಹಾಯಕ ಕಂದಾಯ ಅಧಿಕಾರಿ (ಶೆ.ಉ.ವಿ) ಬಿಬಿಎಂಪಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಿದೆ.
9) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಸಲ್ಲಿಸಿದೆ
10) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಕಳುಹಿಸಿದೆ.
11) ಹಿರಿಯ / ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 13 ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
12) ಕಛೇರಿ ಪ್ರತಿ.



Scanned by CamScanner